ಸಾಮಾಜಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಆರೋಗ್ಯ ಘಟಕಗಳನ್ನು ತೆರೆಯಲಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಸಂಚಾರಿ ಆರೋಗ್ಯ ಘಟಕ

ಅ) ಸತ್ಯಗಾಲ –ಕೊಳ್ಳೇಗಾಲ ತಾಲ್ಲೂಕು ಅ) ವಡೆಯರ ಪಾಳ್ಯ

ಆ) ಅನ್ನೂರು – ಕೊಳ್ಳೇಗಾಲ ತಾಲ್ಲೂಕು ಆ) ಚಂದಕ ವಾಡಿ ಕೊಳ್ಳೇಗಾಲ ತಾಲ್ಲೂಕ್

ಇ) ಅಗರಂಬಳ್ಳಿ – ಯಳಂದೂರು ತಾಲ್ಲೂಕು

ಈ) ಸಂತೇಮಾಧನಹಳ್ಳಿ – ಚಾಮರಾಜನಗರ ತಾಲ್ಲೂಕು

ಉ) ಅಂಕಲವಾಡಿ – ಚಾಮರಾಜ ನಗರ ತಾಲ್ಲೂಕು

ಊ) ವೆಂಕಟಯ್ಯನ ಛತ್ರ – ಚಾಮರಾಜನಗರ ತಾಲ್ಲೂಕು.

ಇ) 1) ಕರ್ನಾಟಕದಲ್ಲಿ ಆದಿವಾಸಿ ಜನಾಂಗದ ಯಾದಿಯಲ್ಲಿ 2 ಜನಾಂಗಗಳು ಬರುತ್ತವೆ ಅವುಗಳು ಜೇನುಕುರುಬರು ಮತ್ತು ಕೊರಗರು.

2) ಜೇನುಕುರುಬರು, ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ಹಾಗೂ ಕೊಡಗು ಜಿಲ್ಲೆಯ ನಾಗರಹೊಳೆ ಮೂರ್ಕಾಲು ಮತ್ತು ಕುಶಾಲನಗರ ತಾಲ್ಲೂಕುಗಳಲ್ಲಿ ವಾಸಿಸುತ್ತಾರೆ. ಈ ಜನಾಂಗದ ಸಂಖ್ಯೆ 34,746 ಇರುತ್ತದೆ.

3) ಕೊರಗರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಬೆಳ್ತಂಗಡಿ, ಕಾರ್ಕಳ ಕುಂದಾಪುರ, ಪುತ್ತೂರು, ಸುಳ್ಯ, ಬಂಟ್ವಾಳ ಹಾಗೂ ಮಂಗಳೂರು ತಾಲ್ಲೂಕುಗಳಲ್ಲಿ ವಾಸಿಸುತ್ತಿದ್ದು ಈ ಜನಾಂಗದ ಜನಸಂಖ್ಯೆ 15,146 ಇರುತ್ತದೆ.

ಚೆನ್ನಪ್ಪರೆಡ್ಡಿ ಆಯೋಗದ ಬಗ್ಗೆ

588. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದುಳಿದ ಜಾತಿಗಳನ್ನು ಗುರುತಿಸಲು ಸೂಚಿಸಲಾಗದ್ದ ನ್ಯಾಯಮೂರ್ತಿ ಓ. ಚೆನ್ನಪ್ಪರೆಡ್ಡಿ ಆಯೋಗದ ಕಾರ್ಯನಿರ್ವಹಣೆಗಾಗಿ ಸರ್ಕಾರ ಖರ್ಚು ಮಾಡಿದ ಹಣದ ಮೊತ್ತವೆಷ್ಟು

ಆ) ಮೇಲ್ಕಂಡ ಆಯೋಗದ ವರದಿಯನ್ನು ತಿರಸ್ಕರಿಸಲು ಸರ್ಕಾರ ತೀರ್ಮಾನಿಸಿದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಜಾರಿಗೆ ತರಲಾಗುವುದು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ರೂ.33,82,710–75

ಆ) ನ್ಯಾಯಮೂರ್ತಿ ಓ.ಚೆನ್ನಪ್ಪರೆಡ್ಡಿ ವರದಿಯು ಸಚಿವ ಸಂಪುಟ ಉಪಸಮಿತಿಯ ಪರಿಶೀಲನೆಯಲ್ಲಿದೆ.

ಇ) ಸಚಿವ ಸಂಪುಟದ ಉಪ ಸಮಿತಿಯ ವರದಿಯು ಬಂದ ನಂತರ ಪರಿಶೀಲಿಸಲಾಗುವುದು.

ಕಿತ್ತೂರರಾಣಿ ಚೆನ್ನಮ್ಮನ ವಾಸದ ಮನೆಯನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡುವುದು

203. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?